ದಿನಾಂಕಃ **02-11-2021** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆಯನ್ನು ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ ಆರ್ ಎನ್ ಎಮ್ ವಕೀಲರಿಂದಃ

30. ಕರಾರು ಪತ್ರದನ್ವಯ ಯಾವುದೇ ವಿಷಯದ ಬಗ್ಗೆ ಇರುವ ತಂಟೆಯನ್ನು ಮುಖ್ಯ ಇಂಜಿನಿಯರರವರ ಗಮನಕ್ಕೆ ತಂದಾಗ ಅದಕ್ಕೆ ಅವರು ಪರಿಹಾರವಾಗಿ ಉತ್ತರ ನೀಡಬಹುದು ಅಥವಾ ನೀಡದೇ ಇರಬಹುದು. 90 ದಿನಗಳಲ್ಲಿ ಉತ್ತರ ನೀಡದೇ ಇದ್ದರೇ ನ್ಯಾಯಾಲಯಕ್ಕೆ ಬರಬಹುದು ಎಂದರೆ ಸರಿ. ಮುಖ್ಯ ಇಂಜಿನಿಯರವರು ಯಾವುದೇ ಸಾಕ್ಷ್ಯ ಪಡೆದುಕೊಳ್ಳುವುದಿಲ್ಲ. ನನ್ನ ವಿರುದ್ಧ ನಿರ್ಣಯವಾದರೇ ನ್ಯಾಯಾಲಯಕ್ಕೆ ಬರುವ ಹಕ್ಕು ಇರುತ್ತದೆ ಎಂದರೆ ಸರಿ. ಅವರಿಗೆ ಆರ್ಬಿಟ್ರೇಟರ ತರಹ ನಿರ್ಣಯ ಕೊಡುವ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನನ್ನ ಪ್ರಕಾರ ಅವರೇ ಆರ್ಬಿಟ್ರೇಟರ. ಅವರು ಕೊಟ್ಟ ನಿರ್ಣಯದ ಮೇಲೆ ನ್ಯಾಯಾಲಯಕ್ಕೆ ಹೋಗಬೇಕು. ನಾನು ಮುಖ್ಯ ಇಂಜಿನಿಯವರವರ ಬಳಿ ತಂಟೆ ಬಗ್ಗೆ ಹೇಳಿದ್ದೆ. ಅವರು ಉತ್ತರ ಕೊಟ್ಟಿರಬಹುದು. ನಿಪಿ 20 ಮತ್ತು 22 ರಂತೆ ಅವರು ಉತ್ತರ ಕೊಟ್ಟಿದ್ದಾರೆ. ಸದರಿ ನಿಪಿ 20 ಮತ್ತು 22 ರ ಮೇಲೆ ನ್ಯಾಯಾಲಯಕ್ಕೆ ಹೋಗಲು ಅಡಚಣೆ ಇತ್ತೇ ಎಂಬುದಕ್ಕೆ ಸಾಕ್ಷಿ ತಾವು ಅದರ ಮೇಲೆ ಆರ್ಬಿಟ್ರೇಶನಗೆ ಹೋದೆವು ಮತ್ತು ಆರ್ಬಿಟ್ರೇಟರವರ ಆದೇಶದ ಮೇಲೆ ನ್ಯಾಯಾಲಯಕ್ಕೆ ಬಂದಿದ್ದೇವೆ ಎನ್ನುತ್ತಾರೆ. ಮುಖ್ಯ ಇಂಜಿನಿಯವರವರು ತಾನು ಆರ್ಬಿಟ್ರೇಟರ ಅಲ್ಲ ಎಂದು ಹೇಳಿಲ್ಲ. ಕರಾರು ಪತ್ರದ ಕಂಡಿಕೆ 29 ಆರ್ಬಿಟ್ರೇಶನ ಅಲ್ಲ ಎಂದು ಹೇಳಿಲ್ಲ. ನನ್ನ ಯಾವುದೇ ಕ್ಲೇಮಗಳು ಊರ್ಜಿತ ಆಗುವುದಿಲ್ಲ ಎಂದು ಗೊತ್ತಿದ್ದರಿಂದ ನಾನು ಆರ್ಬಿಟ್ರೇಶನ ಮೂಲಕ ಏನಾದರೂ ಪಡೆಯಬಹುದು ಎಂದು ಹಾಗೇ ಮಾಡಿದ್ದೆ ಎಂದರೆ ಸರಿಯಲ್ಲ.

31. ಸುಪ್ರೀಂ ಕೋರ್ಟ ಮುಂದೆ ಇದ್ದ ಕೇಸದಲ್ಲಿ ನಾನು ಮತ್ತು ಪ್ರತಿವಾದಿ ನಿಗಮ ಪಕ್ಷದಾರರಾಗಿದ್ದೆವು ಎಂದರೆ ಸರಿ. ಸುಪ್ರಿಂ ಕೋರ್ಟ ನಿರ್ಣಯವಾದ ನಂತರ ಮತ್ತೆ ಆರ್ಬಿಟ್ರೇಟರ

ಬಳಿ ಹೋಗುವುದು ಅವಶ್ಯ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ NOC ಪಡೆಯಲು ಹೋಗಿದ್ದೆವು ಎನ್ನುತ್ತಾರೆ.

32. ಈ ಟೆಂಡರನಲ್ಲಿ ಇರುವ ಕೆಲಸದ ಅಳತೆಯ ಬಗ್ಗೆ ನನ್ನ ಯಾವುದೇ ತಕರಾರು ಇಲ್ಲ ಎಂದರೆ ಸರಿ. ದರದ ಬಗ್ಗೆ ಮಾತ್ರ ತಕರಾರು ಇದೆ. ನಾನು ಟೆಂಡರನಲ್ಲಿ ನಮೂದಿಸಿದ ದರ ಟೆಂಡರ್ ಕೆಲಸ ಮುಗಿಯುವವರೆಗೂ ನನಗೆ ಬಂಧನಕಾರಕ ಎಂದರೆ ಸರಿ. ಸದರಿ ದರ ಕಂಡಿಕೆ 13 ರ ಪ್ರಕಾರ ಮಾತ್ರ ಬದಲಾವಣೆ ಮಾಡಬಹುದು ಎಂದರೆ ಸರಿ, ಸಾಕ್ಷಿ ತಾನು 13(ಎ) ಪ್ರಕಾರ ಕೇಳುತ್ತಿದ್ದೇನೆ ಎನ್ನುತ್ತಾರೆ. ನನಗೆ ಕೊಟ್ಟಿರುವ ಹಣ ಟೆಂಡರ್ ನಿಯಮಾಳಿಯ ಪ್ರಕಾರ ಕೊಡಲಾಗಿದೆ ಎಂದರೆ ಸರಿಯಲ್ಲ. ಶೇ. 125 ಕ್ಕಿಂತ ಕೆಲಸ ಹೆಚ್ಚಾಗಿದ್ದರಿಂದ ಪ್ರತಿವಾದಿಯರು ಕಂಡಿಕೆ 13(ಬಿ) ಪ್ರಕಾರ ಕೊಟ್ಟಿದ್ದಾರೆ, ಆದರೆ ಅದು ಸರಿಯಲ್ಲ. ನನ್ನ ಮೊದಲನೇ ಕ್ಲೇಮ್ ಸಂಪೂರ್ಣ ಕಾನೂನು ಬಾಹಿರವಾದದ್ದು ಎಂದರೆ ಸರಿಯಲ್ಲ.

33. ಎರಡನೇ ಕ್ಲೇಮ್ ಎಸ್ ಆರ್ ಆರ್ ಬಿ ಬಗ್ಗೆ ಇರುವುದನ್ನು ಪ್ರತಿವಾದಿಯರು ಸರಿಯಾಗಿ ಪರಿಗಣಿಸಿ, ಅದನ್ನು ಎಸ್ ಆರ್ ನಲ್ಲಿ ಬರುತ್ತಿದ್ದರೂ ಸಹ ಎಸ್ ಆರ್ ಆರ್ ಬಿ ಎಂದು ಪರಿಗಣಿಸಿ ಕೊಟ್ಟಿರುವುದು ಸರಿಯಾಗಿದೆ ಎಂದರೆ ಸರಿಯಲ್ಲ. ಪ್ರತಿವಾದಿಯರು ರೂ.96.70 ಪ್ರತಿ ಕ್ಯೂ.ಮೀ ಗೆ ನಿರ್ಧರಿಸಿದ್ದು ಸರಿಯಾಗಿದೆ ಎಂದರೆ ಸರಿಯಲ್ಲ. ಅದನ್ನು ಇ ಎಫ್ ಐ ಮೂಲಕ ನಿರ್ಧರಿಸಬೇಕಾಗಿದ್ದರಿಂದ ತಡವಾಗಿದೆ ಎಂಬುದಕ್ಕೆ ಸಾಕ್ಷಿ ಅದು ಪ್ರತಿವಾದಿಯರಿಗೆ ಸಂಬಂಧಿಸಿದ್ದು ಎನ್ನುತ್ತಾರೆ. ನಾನು ಅತೀ ಕಡಿಮೆ ದರ ಟೆಂಡರನಲ್ಲಿ ಪೋರ್ಟ ಮಾಡಿದ್ದರಿಂದ ನನಗೆ ಉಂಟಾಗುವ ನಷ್ಟದಿಂದ ತಪ್ಪಿಸಿಕೊಳ್ಳಲು ಒಂದು ಹೊಸ ಐಟೆಮ್ ಸೃಷ್ಟಿಸಿ ಆ ಮೂಲಕ ಸುಳ್ಳು ಕ್ಲೇಮ್ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ 119 ರೂ. ಪ್ರತಿ ಕ್ಯೂ.ಮೀ.ಗೆ ನಾನು ಅರ್ಹ ಅಲ್ಲ ಎಂದರೆ ಸರಿಯಲ್ಲ.

34. ಸಿಸಿ ಲೈನಿಂಗ್ ಕುರಿತಂತೆ ಕ್ಲೇಮನಲ್ಲಿ ನನ್ನ ಕಳಪೆ ಕಾಮಗಾರಿ ಕಂಡುಬಂದಿದ್ದರಿಂದ ಮತ್ತು ನಾನು ಒಪ್ಪಿಕೊಂಡಂತೆ ಪ್ರತಿವಾದಿಯರು ಸದರಿ ಹಣ ಕಟಾಯಿಸಿದ್ದಾರೆ ಎಂದರೆ ಸರಿಯಲ್ಲ. ನಿಡಿ 23 ರಂತೆ ನಾನು ಒಪ್ಪಿಕೊಂಡಿದ್ದರಿಂದ ಟೆಂಡರ್ ನಿಯಮ 16 ರಂತೆ ಕಟಾವಣೆ ಮಾಡಿದ್ದು ಸರಿ ಎಂದರೆ ಸರಿಯಲ್ಲ. ಸ್ಟ್ಯಾಕಿಂಗ್ ಚಾರ್ಜಸನ್ನು 6 ನೇ ಬಿಲನಲ್ಲಿ ಕಟಾವಣೆ ಮಾಡಿದ್ದನ್ನು 7 ನೇ ಬಿಲನಲ್ಲಿ ಬಿಡುಗಡೆ ಮಾಡಿದ್ದಾರೆ. ಸ್ಟ್ಯಾಕ್ ಮಾಡುವವರೆ ಕಟಾವಣೆ ಮಾಡಿ ಸ್ಟ್ಯಾಕ್ ಮಾಡಿದ್ದನ್ನು ತೋರಿಸಿದಾಗ ಬಿಡುಗಡೆ ಮಾಡುತ್ತಾರೆ ಎಂದರೆ ಸರಿ. ಮೂರನೇ ಬಿಲ್ (ನಿಪಿ 34 ರಲ್ಲಿ ಆರ್ ಎ ಬಿಲ್ ನಂಃ 3) ಈ ಗುತ್ತಿಗೆಗೆ ಸಂಬಂಧಪಟ್ಟದ್ದು ಅಲ್ಲ ಎಂದರೆ ನಾನು ಏನು ಹೇಳಲಾರೆ. ಏಕೆಂದರೆ ಅದರಲ್ಲಿ ಕಿ.ಮೀ ಕಾಣುತ್ತಿಲ್ಲ ಎನ್ನುತ್ತಾರೆ. ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿ ಬಿಲನಲ್ಲಿ ಅಳತೆ ನಮೂದಿಸಲಾಗಿರುತ್ತದೆ ಎಂದರೆ ಸರಿ. ಸದರಿ ಅಳತೆ ಕೊನೆಯ ಅಳತೆಗೆ ಹೊಂದಾಣಿಕೆಯಾಗಬೇಕು ಎಂದರೆ ಸರಿ. ಈ ಬಿಲನ ಅಳತೆ ಕೊನೆಯ ಬಿಲನಲ್ಲಿ ಅಳತೆಗೆ ಹೊಂದಾಣಿಕೆಯಾಗಿದೆ. ಅಳತೆ ಪುಸ್ತಕದಲ್ಲಿ ನಮೂದಾಗಿರುವಂತೆ ಬಿಲ್ ತಯಾರಿಸುತ್ತಾರೆ ಎಂದರೆ ಸರಿ. ಬಿಲ್ ರೆಸ್ ಮಾಡಿದಾಗ ಹಣ ಕೊಡುತ್ತಾರೆ ಎಂಬುದಕ್ಕೆ ಸಾಕ್ಷಿ ತಡವಾಗಿ ಕೊಟ್ಟಿದ್ದಾರೆ ಎನ್ನುತ್ತಾರೆ. ಯಾವುದೇ ಬಿಲಗಳಲ್ಲಿ ಅನಾವಶ್ಯಕವಾಗಿ ವಿಳಂಬ ಆಗಿಲ್ಲ ಎಂದರೆ ಸರಿಯಲ್ಲ. ಬಿಲ್ ಕೊಡುವಲ್ಲಿ ವಿಳಂಬವಾದರೇ ಗುತ್ತಿಗೆ ಮುಗಿಸಲು ಹೆಚ್ಚಿಗೆ ಸಮಯ ಕೊಡುತ್ತಾರೆ, ಆದರೆ ಹೆಚ್ಚಿಗೆ ಹಣ ಕೊಡುವುದಿಲ್ಲ ಎಂಬುದಕ್ಕೆ ಸಾಕ್ಷಿ ಸರಿ ಎನ್ನುತ್ತಾರೆ.

35. ಐದನೇ ಬಿಲ (ನಿಪಿ 34) ನ್ನು ಟೆಂಡರ್ ಅವಧಿಯೊಳಗೆ ಮಾಡಿದ ಕೆಲಸಕ್ಕೆ ಪಾಸ್ ಮಾಡಿ ಹಣ ನೀಡಿದ್ದಾರೆ ಎಂಬುದಕ್ಕೆ ಸಾಕ್ಷಿ ದಾಖಲೆ ನೋಡದೇ ಹೇಳಲಾರೆ ಎನ್ನುತ್ತಾರೆ. ಐದನೇ ಬಿಲ್ ತೋರಿಸಿದರೂ ಸಾಕ್ಷಿ ಹಾಗೇ ಹೇಳುತ್ತಾರೆ. ಕ್ಯೂರಿಂಗ್ ಮಾಡಲು ಹೆಚ್ಚಿನ ಸಮಯ ಬೇಕು ಎಂದು ಟೆಂಡರ್ ಅವಧಿ ವಿಸ್ತರಿಸಲು ನಾನು ಕೇಳಿದ್ದೆ ಎಂಬುದಕ್ಕೆ ಸಾಕ್ಷಿ ಅದು ದಾಖಲೆಯಲ್ಲಿದೆ ಎನ್ನುತ್ತಾರೆ.

ನಾನು ಆ ಬಗ್ಗೆ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಟೆಂಡರ್ ಅವಧಿಗಿಂತ ನಂತರ ಮಾಡಿದ ಕೆಲಸ ಎಷ್ಟು ಎಂಬುದು ನಾನು ಹಾಜರು ಪಡಿಸಿದ ದಾಖಲೆಗಳಲ್ಲಿದೆ. ಮೌಖಿಕವಾಗಿ ಹೇಳಲಾರೆ. ಟೆಂಡರ ಅವಧಿಯಲ್ಲಿ 1.47 ಕೋಟಿ ರೂ. ಕೆಲಸ ಮುಗಿಸಿದ್ದಕ್ಕೆ ಹಣ ಬಿಡುಗಡೆ ಮಾಡಲಾಗಿದೆ ಮತ್ತು ಚಿಕ್ಕ ಪುಟ್ಟ ಕೆಲಸ ನಂತರ ಮಾಡಿದ್ದೇನೆ ಎಂಬುದಕ್ಕೆ ಸಾಕ್ಷಿ ಸದರಿ ವಿಷಯ ದಾಖಲೆಗಳಲ್ಲಿದೆ ಎನ್ನುತ್ತಾರೆ. ಅವಧಿ ವಿಸ್ತರಣೆ ಮಾಡಿರುವುದೇ ಕೆಲವು ಷರತ್ತುಗಳಿಗೆ ಒಳಪಟ್ಟಿದ್ದರಿಂದ ನಂತರದ ಕೆಲಸಗಳಿಗೆ ಶೇ. 20 ರಷ್ಟು ಹೆಚ್ಚು ಹಣ ಕೇಳುವುದು ಕಾನೂನು ಬಾಹಿರ ಎಂದರೆ ಸರಿಯಲ್ಲ. ಆದ್ದರಿಂದ ನಾನು 2.45 ಕೋಟಿ ರೂ. ಕೇಳುವುದು ಯಾವುದೇ ಆಧಾರರಹಿತ ಎಂದರೆ ಸರಿಯಲ್ಲ.

36. ಟೆಂಡರ್ ಅವಧಿಯಲ್ಲಿ ನಾನು ಅಡ್ಡಾದಿಡ್ಡಿಯಾಗಿ ಕೆಲಸ ಮಾಡಿದೆ ಮತ್ತು ಕೆಲಸ ಮುಗಿಸದೇ ಟೆಂಡರ ಅವಧಿಯ ನಂತರವೂ ಕೆಲಸ ಮುಗಿಸಲಿಲ್ಲ ಎಂದರೆ ಸರಿಯಲ್ಲ. ನಾನು ಸರಿಯಾಗಿ ಮಾಡುತ್ತಿಲ್ಲ ಎಂದು ಪ್ರತಿವಾದಿಯರು ಪತ್ರ ಬರೆದಿದ್ದರು ಎಂಬುದಕ್ಕೆ ಸಾಕ್ಷಿ ದಾಖಲೆ ನೋಡದೇ ಏನೂ ಹೇಳಲಾರೆ ಎನ್ನುತ್ತಾರೆ.

37. ಓವರಹೆಡ್ ಚಾರ್ಜಸ್ ಬಗ್ಗೆ ಸ್ಥಳದಲ್ಲಿ ಏನೇನು ಯಂತ್ರೋಪಕರಣ ಮತ್ತು ಕೆಲಸಗಾರರು ಇದ್ದರು ಎಂಬ ವಿವರ ಪ್ರತಿವಾದಿಯರಿಗೆ ಕೊಟ್ಟಿದ್ದೇನೆ. ಪ್ರತಿವಾದಿಯರು ಕೇಳಿದ ದಾಖಲೆಗಳನ್ನು ಕೊಟ್ಟಿದ್ದೇನೆ. ಬಿಡ್ ಸಲ್ಲಿಸುವಾಗಲೇ ಕೊಟ್ಟಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ಅಂತಹ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ಕೆಲಸ ನಿಲ್ಲಿಸುವಂತೆ ಹೇಳಿದ್ದಾರೆ ಎಂಬುದಕ್ಕೆ ಸಾಕ್ಷಿ ದಾಖಲೆ ನೋಡದೇ ಹೇಳಲಾರೆ ಎನ್ನುತ್ತಾರೆ. ನನ್ನ ಕ್ಲೆಮ್ ನಂಬರ 7 ಪ್ರಕಾರ ನಾನು ಯಾವುದೇ ಪರಿಹಾರಕ್ಕೆ ಅರ್ಹ ಅಲ್ಲ ಎಂದರೆ ಸರಿಯಲ್ಲ.

38. ಇ ಎಮ್ ಡಿ ಹಣ ಗುತ್ತಿಗೆ ಕರಾರಿನಂತೆ ಬಿಡುಗಡೆ ಮಾಡಿದ್ದಾರೆ ಮತ್ತು ಅದರ ಮೇಲೆ ನಾನು ಹೆಚ್ಚಿನ ಹಣ ಕೇಳಿದ್ದು ಸರಿಯಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಕೇಳಿ , ಅವರು ಹೇಳಿದಂತೆಯೇ ಬೆರಳಚ್ಚು ಮಾಡಿಕೊಂಡು, ನಂತರ ಓದಿ ಹೇಳಲಾಯಿತು ಎಂದು ಈ ಮೂಲಕ ಪ್ರಮಾಣಿಕರಿಸಲಾಗಿದೆ)

ಓ ಹೇ ಕೇ ಸರಿ ಅದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.